ನಮೂದಿಸಿದಂತೆ ರೂ. 50.25 ಕೋಟಿ ಹಾಗೂ ರೂ. 9.90 ಕೋಟಿಗಳ ಅನುದಾನದಲ್ಲಿ ವಿವಿಧ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಕಳೆದ 1 1/2 ವರ್ಷಗಳಿಂದ ಹುಬ್ಬಳ್ಳಿ ಧಾರವಾಡದಲ್ಲಿ 3 – 4 ದಿನಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ.

ಈ) ವಿಶ್ವಬ್ಯಾಂಕ್ ನೆರವಿನ ಅಡಿಯಲ್ಲಿ ಅಮ್ಮಿನಭಾವಿಯಿಂದ ಹುಬ್ಬಳ್ಳಿಗೆ ನೇರವಾಗಿ ನೀರು ಸರಬರಾಜು ಮಾಡುವ 1168 ಮೀ.ಮೀ. ವ್ಯಾಸದ ಎಂ.ಎಸ್.ಏರು ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿ ಹಾಗೂ ಅಮ್ಮಿನಭಾವಿಯಲ್ಲಿ 400 ಅಶ್ವಶಕ್ತಿ ಪಂಪ್ ಸೆಟ್ ಅಳವಡಿಸುವ ಕಾಮಗಾರಿಯು ಮುಗಿದಿದ್ದು ಜುಲೈ 2007ರ ಅಂತ್ಯದೊಳಗೆ ಚಾಲನೆಗೊಳಿಸಲಾಗುವುದು. ಅಲ್ಲದೇ ವಿಶ್ವ ಬ್ಯಾಂಕ್ ನೆರವಿನ ಅಡಿಯಲ್ಲಿ ಕ್ವಿಕ್ ಫಿಕ್ಸ್ ಯೋಜನೆ ಮಂಜೂರಾಗಿದ್ದು ಯೋಜನೆಯಡಿ ಹುಬ್ಬಳ್ಳಿ ನಗರದಲ್ಲಿ 17.5 ಕಿ.ಮೀ. ಹಾಗೂ ಧಾರವಾಡ ಶಹರದಲ್ಲಿ 9.00 ಕಿ.ಮೀ. ಪೂರಕ ಕೊಳವೆ ಮಾರ್ಗಗಳನ್ನು ಅಳವಡಿಸಲು ಅವಕಾಶವಿದ್ದು ಕಾಮಗಾರಿಗಳನ್ನು ಪೂರ್ಣಗೊಳಿಸಿ ಚಾಲನೆಗೊಳಿಸಲಾಗಿದೆ. ಮೇಲೆ ನಮೂದಿಸಿದಂತೆ ರೂ. 50.25 ಕೋಟಿ ಹಾಗೂ ರೂ. 9.90 ಕೋಟಿಗಳ ವೆಚ್ಚದಲ್ಲಿ ವಿವಿಧ ಕಾಮಗಾರಿಗಳನ್ನು ತೆಗೆದು ಕೊಳ್ಳಲು ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗುವುದು.

ಪ್ರಶ್ನೆ ಸಂಖ್ಯೆ : 50 (85) ಶ್ರೀ ಐವಾನ್ ನಿಗ್ಲಿ, ಎಂಎಲ್ಎ (ನಾಮಾಂಕಿತ)

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಬೀದಿ ನಾಯಿಗಳ ಹಾವಳಿಯನ್ನು ತೊಡೆದು ಹಾಕಲು ಸರ್ಕಾರವು ಎದುರಿಸುತ್ತಿರುವ ತೊಂದರೆಗಳೇನು? ಕಳೆದ ಒಂದು ವರ್ಷದಿಂದ ಬೀದಿ ನಾಯಿಗಳು ಕಚ್ಚಿರುವ ಬಗ್ಗೆ ವರದಿಯಾಗಿರುವ ಪ್ರಕರಣಗಳೆಷ್ಟು? ಮತ್ತ ಎಷ್ಟು ಮಂದಿ ಜನ/ಮಕ್ಕಳು ಗಾಯಗೊಂಡಿರುತ್ತಾರೆ ಅಥವಾ ಮರಣ ಹೊಂದಿರುತ್ತಾರೆ ಪರಿಹಾರವನ್ನು ನೀಡಲಾಗಿದೆಯೇ? ಎಷ್ಟು ಹಣವನ್ನು ನೀಡಲಾಗಿದೆ.

ಆ) ನಗರದಲ್ಲಿ ಬೀದಿ ನಾಯಿಗಳು ಹೆಚ್ಚಾಗಲು ಕಾರಣಗಳೇನು;

ಇ) ಬೆಂಗಳೂರು ನಗದಲ್ಲಿ ಬೀದಿ ನಾಯಿಗಳನ್ನು ನಿರ್ಮೂಲನೆ ಮಾಡಲು / ನಿಯಂತ್ರಿಸಲು ಸರ್ಕಾರವು ಸಾರ್ವಜನಿಕರಿಗೆ ನೀಡಿರುವ ಮಾರ್ಗಸೂಚನೆಗಳೇನು;

ಈ) ಈವರೆವಿಗೂ ಇದಕ್ಕಾಗಿ ಖರ್ಚು ಮಾಡಿರುವ ಹಣವೆಷ್ಟು;

ಉ) ವಿವಿಧ ಸರ್ಕಾರೇತರ ಸಂಸ್ಥೆಗಳು ಕೆಲಸವನ್ನು ನಿರ್ವಹಿಸಿರುವ ಬಗ್ಗೆ ಸಂತಾನಹರಣ ಕಾರ್ಯಕ್ರಮದ ಅನುಷ್ಠಾನವನ್ನು ಮೌಲ್ಯ ಮಾಪನ ಮಾಡಲಾಗಿದೆಯೇ; ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಬಾಕಿ ಇರುವ ಹಣವನ್ನು ಬಿಡುಗಡೆ ಮಾಡಲಾಗಿದೆಯೇ; ಮತ್ತು ಬಾಕಿ ಇರಲು ಕಾರಣಗಳೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ

ಅ) ಬೀದಿ ನಾಯಿಗಳ ಹಾವಳಿಯನ್ನು ಹತೋಟಿ ಮಾಡುವಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಯಾವ ಆಡಚಣೆಗಳಿರುವುದಿಲ್ಲ. ಇಬ್ಬರು ಮಕ್ಕಳು ನಾಯಿ ಕಡಿತದಿಂ ಹಾಗೂ ಇಬ್ಬರು ಮಕ್ಕಳು ಹಾಗೂ ಓರ್ವ ವಯಸ್ಕರು ಹುಚ್ಚು ನಾಯಿ ಕಡಿತದಿಂದ ರೇಬೀಸ್ ರೋಗದಿಂದ ಮರಣ ಹೊಂದಿರುತ್ತಾರೆ. ನಾಯಿಗಲ ಕಡಿತದಂದ ಮರಣವನ್ನಪ್ಪಿದ ಎರಡು ಮಕ್ಕಳ ಕುಟುಂಬಗಳಿಗೆ ಮತ್ತು ರೇಬೀಸ್‌ನಿಂದ ಮೃತಪಟ್ಟ ಒಬ್ಬ ಬಾಲಕನ ಕುಟುಂಬಕ್ಕೆ ಒಟ್ಟು ರೂ. 2.65 ಲಕ್ಷಗಳ ಪರಿಹಾರವನ್ನು ನೀಡಲಾಗಿರುತ್ತದೆ.

ಆ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬೀದಿನಾಯಿಗಳ ಗಣತಿಯನ್ನು ಪಶುಸ್ಡಂಗೋಪನೆ ಇಲಾಕೆ ಮೂಲಕ ಕೈಕೊಂಡಿದ್ದು ಇದರಿಂದ ಬೆಂಗಳೂರು ನಗರದಲ್ಲಿ ಬೀದಿ ನಾಯಿಗಳ ನಿಖರವಾದ ಅಂಕಿ ಅಂಶಗಳು ಲಭ್ಯವಾಗುತ್ತದೆ.

ಇ) ಪಾಲಿಕೆಯು ಮಾಧ್ಯಮಗಳಲ್ಲಿ ಶುಚಿತ್ವ ಕಾಪಾಡಲು ಹಾಗೂ ಬೀದಿ ನಾಯಿಗಳ ಕುರಿತು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಪ್ರಕಟಣೆ ನೀಡಿದೆ.

ಈ) 2001 ರಿಂದ ಇಲ್ಲಿಯವರೆಗೆ ನಾಯಿಗಳ ಸಂತಾನಹರಣ ಕಾರ್ಯಕ್ರಮಕ್ಕೆ (ಎಬಿಸಿ ಕಾರ್ಯಕ್ರಮ) ರೂ. 686 ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ಉ) ನಾಲ್ಕು ಎನ್‌ಜಿಓಗಳು ನಾಯಿಗಳ ಸಂತಾನಹರಣ ಕಾರ್ಯಕ್ರಮದ ಅನುಷ್ಟಾನ ಮಾಡುತ್ತಿದ್ದು 2001 ರಿಂದ 2,30,335 ನಾಯಿಗಳನ್ನು ಹಿಡಿದಿದ್ದು 1,76,146 ನಾಯಿಗಳ ಸಂತಾನಹರಣ ಮಾಡಿದ್ದು, 1,25,120 ನಾಯಿಗಳಿಗೆ ಲಸಿಕೆ ಹಾಕಿದ್ದು 45,980 ನಾಯಿಗಳಿಗೆ ದಯಾಮರಣ ಮಾಡಿದೆ., ಡಾ. ಸುದರ್ಶನ್‌ರವರ ನೇತೃತ್ವದ ತಂಡದಿಂದ ಕಾರ್ಯಧಾರಿತ ಪರಿಶೀಲನೆಯನ್ನು ಮಾಡಿಸಿದೆ. ಎನ್.ಜಿ.ಓ.ಗಳಿಗೆ ಪಾವತಿ ಮಾಡಬೇಕಾಗಿರುವ ಯಾವುದೇ ಹಣ ಬಾಕಿಯಿರುವುದಿಲ್ಲ.

ಪ್ರಶ್ನೆ ಸಂಖ್ಯೆ : 51 (86)ಶ್ರೀ ಐವಾನ್ ನಿಗ್ಲಿ, ಎಂಎಲ್‌ಎ (ನಾಮಾಂಕಿತ)

ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ವಿಧಾನ ಮಂಡಲದ ಸದಸ್ಯರೊಂದಿಗೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಶಿಷ್ಟಾಚಾರ ಪಾಲಿಸುವ ಬಗ್ಗೆ ಸರ್ಕಾರದಿಂದ ಹೊರಡಿಸಲಾದ ಅಧಿಕೃತ ಜ್ಞಾಪನಗಳು; ಸುತ್ತೋಲೆಗಳು; ಆದೇಶಗಳು; ಮಾರ್ಗಸೂಚಿಗಳ ಒಟ್ಟು ಸಂಖ್ಯೆ.

ಬಿ) ಶಿಷ್ಟಾಚಾರ ಪಾಲನೆಯ ಬಗ್ಗೆ ಹೊರಡಿಸಲಾದ ಅಧಿಕೃತ ಜ್ಞಾಪನ: ಸುತ್ತೋಲೆ : ಆದೇಶಗಳು : ಮಾರ್ಗಸೂಚಿಗಳನ್ನು ಕೆಲವು ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಪಾಲಿಸುತ್ತಿಲ್ಲ ಎಂಬ ಅಂಶ ಸರ್ಕಾರಕ್ಕೆ ಗೊತ್ತಿದೆಯೇ?

ಸಿ) ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಶಿಷ್ಟಾಚಾರ ಪಾಲಿಸುತ್ತಿಲ್ಲವೆಂಬ ಬಗ್ಗೆ ಸರ್ಕಾರಕ್ಕೆ ದೂರುಗಳೀನಾದರೂ ಬಂದಿವೆಯೇ?

ಡಿ) ಅಂತಹ ಆದೇಶಗಳನ್ನು ಯಾರು ಉಲ್ಲಂಘಿಸುತ್ತಾರೋ ಅಂತಹ ಅಧಿಕಾರಿಗಳ ವಿರುದ್ಧ ಕೈಗೊಳ್ಳಬಹುದಾದ ಕ್ರಮವೇನು? (ಆದೇಶದ ಪ್ರತಿಯನ್ನು ದಯವಿಟ್ಟು ನೀಡುವುದು)